<u>ಅಸಲು ದಾವಾ</u>- 20/2015 ಡಿ.ಡಬ್ಲ್ಯೂ- 2

ದಿನಾಂಕಃ 27.04.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ- ವಾದಿ ಪರ ಶ್ರೀ.ಹೆಚ್ ಎಂ ಎಸ್ ವಕೀಲರಿಂದ</u>

ಎಲ್ಲಿಯ ತನಕ ಓದಿದ್ದೇನೆ ಎಂದರೆ 4 ನೇ ತರಗತಿ. ಮೃತ ವಾದಿ ಗಿರಿತಿಮ್ಮಪ್ಪರವರು ನನಗೆ ಸಂಬಂಧಿಕರಾಗಬೇಕಾ ಎಂದರೆ ಇಲ್ಲ. 1 ಮತ್ತು 2 ನೇ ವಾದಿಗಳು ಸಹೋದರರು ಎಂದರೆ ಸರಿ. ನಾನು ತಕರಾರು ಸಲ್ಲಿಸುವ ಪೂರ್ವದಲ್ಲಿ ವಾದಿಗಳು ಯಾವ ಪರಿಹಾರಕ್ಕಾಗಿ ದಾವೆ ಹಾಕಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಜಮಿನು ನಮ್ಮದು ಎಂದು ಅವರು ದಾವೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿಯು ಸರ್ವೆ ನಂ.7 ಮತ್ತು ವಿಸ್ತೀರ್ಣ 1 ಎಕರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನುನೋಡಿದ್ದೀರಾ ಎಂದರೆ ಸಾಕ್ಷಿಯು ನಮ್ಮ ಮನೆ ಜಾಗಕ್ಕೆ ಹೊಂದಿಕೊಂಡಂತೆ ಇದೆ ಎಂದು ನುಡಿಯುತ್ತಾರೆ. ನಮ್ಮ ಮನೆಯ ಯಾವ ದಿಕ್ಕಿಗೆ ದಾವಾ ಸ್ವತ್ತು ಇದೆ ಎಂದರೆ ಸಾಕ್ಷಿಯು ಉತ್ತರ ಮತ್ತು ಪಶ್ಚಿಮ ಎರಡೂ ದಿಕ್ಕಿಗೂ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯು ವಾದಿಗಳ ಪೂರ್ವಜರ ಆಸ್ತಿ ಎಂದರೆ ಸಾಕ್ಷಿಯು ಅವರ ತಂದೆಯಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು 1 ಮತ್ತು 2 ನೇ ವಾದಿಗಳ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿ. ನಾನು ಈ ಹಿಂದೆ ವಾದಿಗಳ ವಿರುದ್ದ ಯಾವ ಕಾರಣಕ್ಕೆ ದಾವೆ ಹಾಕಿರುತ್ತೇನೆ ಎಂದು ನಮ್ಮ ಜಾಗವನ್ನು ಅಳತೆ ಮಾಡಿಕೊಂಡು ಒತ್ತುವರಿ ಮಾಡಲು ಬಂದಿದ್ದರಿಂದ ದಾವೆ ಹಾಕಿದ್ದೆ ಎಂದು ನುಡಿಯುತ್ತಾರೆ. ವಾದಿಗಳು ದಾವಾ ಸ್ವತ್ತನ್ನು ಸರ್ವೇಯರ್ ಮೂಲಕ ಅಳತೆ ಮಾಡಿಸಲು ಬಂದಿದ್ದರು ಎಂದರೆ ಸರಿ. ಸದರಿ ಸರ್ವೆ ದಾಖಲೆಯನ್ನು ನೋಡಿದ್ದೀರಾ ಎಂದರೆ ನೋಡಿದ್ದೇನೆ. ದಾವಾ ಆಸ್ತಿಯನ್ನು ಸರ್ವೆ ಮಾಡಿದ ದಾಖಲೆಗಳನ್ನು ವಾದಿಯು ನಾನು ಹಾಕಿದ್ದ ಓಎಸ್ ನಂ.50/2006 ರ ದಾವೆಯಲ್ಲಿ ಸಲ್ಲಿಸಿದ್ದರು ಎಂದರೆ ಸರಿ. ವಾದಿಗಳು ಯಾವ ಕಾರಣಕ್ಕೆ ದಾವಾ ಆಸ್ತಿಯನ್ನು ಅಳತೆ ಮಾಡಿಸಿದ್ದರು ಎಂದರೆ ಸಾಕ್ಷಿಯು 1 ಎಕರೆ ಜಮೀನು ಇದೆ ಯೋ ಇಲ್ಲವೋ ಎಂದು ಅಳತೆ ಮಾಡಿಸಿದ್ದೇನೆ ಎಂದು ನುಡಿಯುತ್ತಾರೆ. 2006 ರ ಪೂರ್ವದಲ್ಲಿ ನಮಗೂ ಹಾಗೂ ವಾದಿಗಳ ಕುಟುಂಬಗಳ ಮಧ್ಯೆ ಮರಗಳ ಸಂಬಂಧ ವ್ಯಾಜ್ಯ ಆಗಿತ್ತು ಎಂದರೆ ಸರಿ. ನಾವು ಹಾಗೂ ವಾದಿಗಳ ಕುಟುಂಬದವರು ಸದರಿ ಮರಗಳು ನಮ್ಮ ನಮ್ಮ ಜಾಗದಲ್ಲಿ ಬರುತ್ತವೆ ಎಂದು ವ್ಯಾಜ್ಯ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಮರಗಳ ವ್ಯಾಜ್ಯದ ಸಂಬಂಧ 1992 ರಲ್ಲಿ ಅಂದಿನ ಡೆಪ್ಯೂಟಿ

ತಹಶೀಲ್ದಾರ್ ರವರು ಸ್ಥಳ ಪರಿಶೀಲನೆ ಮಾಡಿ ಸದರಿ ಮರಗಳು ಸರ್ವೆ ನಂ.7 ರಲ್ಲಿ ಬರುತ್ತವೆ ಎಂದು ವರದಿ ತಯಾರಿಸಿದ್ದರು ಎಂದರೆ ಸರಿ. ಸದರಿ ವರದಿಯ ನಂತರ ಸರ್ವೆ ನಂ.7 ರ ಪಹಣಿಯಲ್ಲೂ ಸಹ 5 ಹುಣಸೇ ಮರಗಳು ಹಾಗೂ 2 ಬೇವಿನ ಮರಗಳನ್ನು ನಮೂದಿಸಿದ್ದಾರೆ ಎಂದರೆ ಸರಿ.

ವಾದಿಗಳು ಸದರಿ ಹುಣಸೇ ಮರಗಳ ಹುಣಸೇಕಾಯಿಯನ್ನು ಕಟಾವು ಮಾಡಲು ಹೋಗಿದ್ದಾಗ ನಾನು 2006 ರಲ್ಲಿ ಅವರ ವಿರುದ್ಧ ದಾವೆ ಹಾಕಿದ್ದೆ ಎಂದರೆ ಸರಿ. ನಮ್ಮ ಮನೆ ಮತ್ತು ಮನೆ ಜಾಗ ಗ್ರಾಮ ಠಾಣೆಗೆ ಬರುತ್ತದೆ ಎಂದರೆ ಸರಿ. ವಾದಿಗಳ ಜಮೀನು ಕಂದಾಯ ಜಮೀನು ಎಂದರೆ ಸರಿ. ಸದರಿ ಹುಣಸೇ ಮರಗಳು ಹಾಗೂ ಬೇವಿನ ಮರಗಳು 1992 ರಿಂದಲೂ ಇಲ್ಲಿಯ ತನಕ ಸರ್ವೆ ನಂ.7 ರಲ್ಲಿ ಇದೆ ಎಂದು ಪಹಣಿಯಲ್ಲಿ ನಮೂದು ಇದೆ ಎಂದರೆ ಸರಿ. ಸರ್ವೆ ನಂ.7 ರಲ್ಲಿರುವ ಹುಣಸೇ ಮರಗಳ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ಹುಣಸೇ ಮರಗಳು ವಾದಿಗಳ ಜಮೀನಿನಲ್ಲಿ ಇದೆ ಎಂದು ಕಂಡು ಬಂದರೆ ವಾದಿಗಳು ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬಹುದು ಎಂದು ಹರಿಹರ ನ್ಯಾಯಾಲಯದಲ್ಲಿ ತೀರ್ಪು ಬಂದಿರುತ್ತದೆ ಎಂದರೆ ಗೊತ್ತಿಲ್ಲ. ನಾನು ಈ ಹಿಂದೆ ಹಾಕಿದ ಓಎಸ್ ದಾವೆ ಹಾಗೂ ಅದರ ಮೇಲಿನ ಅಪೀಲಿನ ತೀರ್ಪಿನ ದೃಢೀಕೃತ ಪ್ರತಿಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ.

2015 ರಲ್ಲಿ ವಾದಿಗಳು ಸದರಿ ಹುಣಸೇ ಮರಗಳ ಕಾಯಿಗಳನ್ನು ಕಟಾವು ಮಾಡಲು ಹೋದಾಗ ನಾನು ವಾದಿಗಳಿಗೆ ತಕರಾರು ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಮ್ಮ ಜಾಗದ ಕಡೆ ಇರುವ ಮರದ ಕಾಯಿಗಳನ್ನು ತೆಗೆಯಬೇಡಿ ಎಂದು ಹೇಳಿದ್ದೆ ಎಂದು ನುಡಿಯುತ್ತಾರೆ. ನಾನು ಹುಣಸೇ ಕಾಯಿಗಳನ್ನು ಕಟಾವು ಮಾಡಲು ಅಡ್ಡಿ ಮಾಡಿದ್ದರಿಂದ ವಾದಿಗಳು ಈ ದಾವೆ ಹಾಕಿದ್ದಾರೆ ಎಂದರೆ ಸಾಕ್ಷಿ ನಾನು ಅಡ್ಡಿ ಮಾಡಿಲ್ಲ ನಮ್ಮ ಕಡೆ ಇರುವ ಹುಣಸೇಕಾಯಿಗಳನ್ನು ಮುಟ್ಟಬೇಡಿ ಎಂದು ಹೇಳಿದ್ದೆ ಎಂದು ನುಡಿಯುತ್ತಾರೆ. ಹುಣಸೇ ಮರ ಮತ್ತು ಅದರ ಕಾಯಿಗಳ ಮೇಲೆ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ